**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 3553/2021**

| | | | |
|---|---|---|---|
| **ಹೆಸರು** | **:** | **ಸಿದ್ದಾರೂಢ** | **ದೋ.ಸಾ. 7** |
| **ತಂದೆಯ ಹೆಸರು** | **:** | **ಬಸ್ಸಪ್ಪ** | **ಪ್ರಾ.ಸಾ. 2** |
| **ವಯಸ್ಸು** | **:** | **26 ವರ್ಷ** | **ದಿನಾಂಕಃ 27-02-2024** |
| **ಉದ್ಯೋಗ** | **:** | **ಅಬಕಾರಿ ರಕ್ಷಕ** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 03-01-2020 ರಿಂದ ಇಲ್ಲಿಯವರೆಗೆ ನಾನು ಚಿಂಚೋಳಿ ವಲಯ ಅಬಕಾರಿ ರಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 09-05-2021 ರಂದು ಬೆಳಿಗ್ಗೆ 07-00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಅಬಕಾರಿ ನಿರೀಕ್ಷಕರಾದ ಚಾಸಾ-1 ರವರು ನನಗೆ ಕರೆ ಮಾಡಿ ಚಿಂಚೋಳಿ ಪಟ್ಟಣದಿಂದ ಗ್ರಾಮಾಂತರ ಪ್ರದೇಶಕ್ಕೆ ಅಕ್ರಮ ಮದ್ಯ ಸಾಗಾಟವಾಗುತ್ತಿದೆ ಎಂದು ಎಂದು ಬಾತ್ಮಿ ಬಂದಿದೆ ದಾಳಿ ಮಾಡಬೇಕು ಎಂದು ನನ್ನನ್ನು ಕಚೇರಿಗೆ ಕರೆದರು. ಅದರಂತೆ ನಾನು ಬೆಳಿಗ್ಗೆ 07-00 ಗಂಟೆಗೆ ಕಚೇರಿಗೆ ಹೋದೆ. ಕಚೇರಿಯಲ್ಲಿ ಚಾಸಾ-1 ಮತ್ತು ಚಾಸಾ-8 ರವರಿದ್ದು ನನ್ನನ್ನು ಮತ್ತು ಚಾಸಾ-8 ರವರನ್ನು ಚಾಸಾ-1 ರವರು ಸರ್ಕಾರಿ ಜೀಪಿನಲ್ಲಿ ಕರೆದುಕೊಂಡು ನಾನು, ನಮ್ಮ ಸಿಬ್ಬಂದಿ ಚಾಸಾ-7 ಮತ್ತು 8 ರವರನ್ನು ಕರೆದುಕೊಂಡು ಚಂದಾಪೂರ ಕ್ರಾಸ್ ಹತ್ತಿರ ಇರುವ ಚಹಾ ಅಂಗಡಿ ಬಳಿ ಬಂದು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಚಾರವನ್ನು ತಿಳಿಸಿರುತ್ತೇವೆ. ನಮ್ಮ ಜೊತೆ ದಾಳಿ ಸಂದರ್ಭದಲ್ಲಿ ಹಾಜರಿರಲೂ ಸದರಿ ಪಂಚರು ಒಪ್ಪಿದ್ದರಿಂದ ಅವರನ್ನು ನಮ್ಮ ಜೊತೆ ಚಾಸಾ-1 ರವರು ಕರೆದುಕೊಂಡು ಚಿಂಚೋಳಿಯ ಬಸವೇಶ್ವರ ವೃತ್ತದ ಬಳಿ ಇರುವ ಕಲ್ಬುರ್ಗಿ -ತಾಂಡೂರು ರಸ್ತೆಯಲ್ಲಿ ವಾಹನ ತಪಾಸಣೆ ಮಾಡುತ್ತಿದ್ದೆವು.

ಬೆಳಿಗ್ಗೆ 07-00 ಗಂಟೆ ಸುಮಾರಿಗೆ ಕಲ್ಬುರ್ಗಿ ಕಡೆಗೆ ಹೊರಟಿದ್ದ ಕೆಎ-32 ಇಕೆ-3113 ರ ದ್ವಿ-ಚಕ್ರ ವಾಹನವನ್ನು ತಪಾಸಣೆ ಮಾಡುವ ಸಲುವಾಗಿ ಕೈ ಸನ್ನೆ ಮಾಡಿ ನಿಲ್ಲಿಸುವಂತೆ ಹೇಳುತ್ತಿದ್ದಂತೆ

ಸದರಿ ವಾಹನದ ಚಾಲಕ ನಮ್ಮನ್ನು ನೋಡಿ ಬೈಕನ್ನು ಸ್ಥಳದಲ್ಲೆ ಬಿಟ್ಟು ಓಡಿ ಹೋಗಿರುತ್ತಾನೆ. ಸದರಿ ವ್ಯಕ್ತಿ ಬಿಟ್ಟು ಹೋಗಿದ್ದ ಬೈಕನ ಪೆಟ್ರೋಲ್ ಟ್ಯಾಂಕನ ಮೇಲೆ ಒಂದು ಗೋಣಿ ಚೀಲ ಇರುವುದು ಕಂಡು ಬಂದಿದ್ದರಿಂದ ಅನುಮಾನಗೊಂಡು ಚಾಸಾ-1 ರವರು ಪಂಚರ ಸಮಕ್ಷಮ ಸದರಿ ಚೀಲವನ್ನು ಪರಿಶೀಲಿಸಲು ಶೋಧನಾ ಸಮುಚಿತ ಪತ್ರವನ್ನು ಬರೆದುಕೊಂಡೆನು. ನಂತರ ಬೈಕ್ ಮೇಲೆ ಇದ್ದ ಗೋಣಿ ಚೀಲವನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ 3 ರಟ್ಟಿನ ಬಾಕ್ಸಗಳಲ್ಲಿ 48 ರಂತೆ ತಲಾ 180 ಮಿಲಿಯ ಒಟ್ಟು 144 ಯು.ಎಸ್. ವಿಸ್ಕಿ ಬಾಟಲಿಗಳು ಮತ್ತು ಒಂದು ಬಾಕ್ಸನಲ್ಲಿ ತಲಾ 180 ಮಿಲಿಯ 48 ಓ.ಟಿ. ವಿಸ್ಕಿ ಟೆಟ್ರಾ ಪ್ಯಾಕೆಟುಗಳು ಇರುವುದು ಕಂಡು ಬಂತು. ಅದೇ ರೀತಿ ಸದರಿ ವಾಹನ ತಪಾಸಣೆ ವೇಳೆಗೆ ಬೈಕನಲ್ಲಿ ಒಂದು ಆಧಾರ ಕಾರ್ಡ ಪ್ರತಿ ಸಿಕ್ಕಿದ್ದು ಅದರಲ್ಲಿ ಆರೋಪಿ ಶಿವಾನಂದ ತಂದೆ ಚಂದ್ರಪ್ಪನ ವಿವರ ಮತ್ತು ವಿಳಾಸ ಇರುವುದು ಕಂಡು ಬಂತು. ಆರೋಪಿ ಸದರಿ ಮುದ್ದೆಮಾಲನ್ನು ಬಿಟ್ಟು ಓಡಿಹೋಗಿದ್ದರಿಂದ ಆತ ಅವುಗಳನ್ನು ಅಕ್ರಮವಾಗಿ ಸ್ವಾಧೀನವಾಗಿ ಇಟ್ಟುಕೊಂಡಿದ್ದಾನೆ ಎಂದು ಖಚಿತಗೊಂಡಿದ್ದರಿಂದ ಚಾಸಾ-1 ರವರು ಸದರಿ ಎಲ್ಲಾ ಮದ್ಯದ ಬಾಟಲಿಗಳನ್ನು ಪಂಚರ ಸಮಕ್ಷಮ ಬೆಳಿಗ್ಗೆ 07-40 ರಿಂದ 08-30 ಗಂಟೆವರೆಗೆ ಬರೆಯಲಾದ ಪಂಚನಾಮೆ ದಾಖಲೆಯಡಿ ಜಪ್ತು ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಚಾಸಾ-1 ರವರು 6 ಯು.ಎಸ್.ವಿಸ್ಕಿ ಬಾಟಲಿಗಳನ್ನು ಮತ್ತು ಎರಡು ಓ.ಟಿ.ವಿಸ್ಕಿ ಟೆಟ್ರಾ ಪ್ಯಾಕೆಟಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಅರಗಿನಿಂದ ಸೀಲ್ ಮಾಡಿರುತ್ತಾರೆ.

ಘಟನಾ ಸ್ಥಳದ ಪೂರ್ವಕ್ಕೆ ಜಬ್ಬಾರ ಪೆಟ್ರೋಲ್ ಪಂಪ್, ಪಶ್ಚಿಮಕ್ಕೆ ಕಲ್ಬುರ್ಗಿ ರಸ್ತೆ, ಉತ್ತರಕ್ಕೆ ಚಿಂಚೋಳಿ ರಸ್ತೆ ಮತ್ತು ದಕ್ಷಿಣಕ್ಕೆ ತಾಂಡೂರು ರಸ್ತೆ ಇರುತ್ತದೆ.

ನಂತರ ವಶಕ್ಕೆ ಪಡೆದ ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಬೆಳಿಗ್ಗೆ 09-00 ಗಂಟೆ ಸುಮಾರಿಗೆ ಕಚೇರಿಗೆ ವಾಪಸ್ಸಾಗಿ ಚಾಸಾ-1 ರವರು ಆರೋಪಿ ವಿರುದ್ಧ ಸ್ವ-ಫಿರ್ಯಾದಿಯನ್ನು ತಯಾರಿಸಿ ಅದರ ಆಧಾರದ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸಿರುತ್ತಾರೆ.

ದಾಳಿಯಲ್ಲಿ ಪಾಲ್ಗೊಂಡ ಬಗ್ಗೆ ನಾನು ಮತ್ತು ಚಾಸಾ-8 ರವರು ತನಿಖಾಧಿಕಾರಿ ಚಾಸಾ-9 ರವರ ಮುಂದೆ ನಮ್ಮಗಳ ಹೇಳಿಕೆಗಳನ್ನು ಕೊಟ್ಟಿರುತ್ತೇವೆ.

ದಾಳಿ ಕಾಲಕ್ಕೆ ಚಾಸಾ-1 ರವರು ಜರುಗಿಸಿದ ಪಂಚನಾಮೆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನಿಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

ಘಟನಾ ಸ್ಥಳದಲ್ಲಿ ಚಾಸಾ-1 ರವರು ಜರುಗಿಸಿದ ಶೋಧನಾ ಸಮೂಚಿತ ಪತ್ರವನ್ನು ಈಗ

ನೋಡುತ್ತಿದ್ದು ಅದನ್ನಿಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ.

ಪಂಚನಾಮೆ ಕಾಲಕ್ಕೆ ಚಾಸಾ-1 ರವರು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿದ್ದ 6 ಯು.ಎಸ್.ವಿಸ್ಕಿ ಬಾಟಲಿಗಳನ್ನು ಮತ್ತು ಎರಡು ಓ.ಟಿ.ವಿಸ್ಕಿ ಟೆಟ್ರಾ ಪ್ಯಾಕೆಟಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ 6 ಖಾಲಿ ಬಾಟಲಿಗಳನ್ನು ಈಗಾಗಲೇ ಮು.ಮಾ. 1 ರಿಂದ 6 ಎಂದು ಮತ್ತು ಎರಡು ಟೆಟ್ರಾ ಪ್ಯಾಕಗಳನ್ನು ಮು.ಮಾ.7 ಮತ್ತು 8 ಎಂದು ಈಗಾಗಲೇ ಗುರುತಿಸಲಾಗಿದೆ.

ದಾಳಿ ಕಾಲಕ್ಕೆ ಓಡಿ ಹೋದ ಆರೋಪಿ ಶಿವಾನಂದ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು ಆತನನ್ನು ಮತ್ತೇ ನೋಡಿ ಗುರುತಿಸುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಕೆ. ವಕೀಲರಿಂದಃ**

ದಿನಾಂಕ 09-05-2021 ರಂದು ಬೆಳಿಗ್ಗೆ 07-00 ಗಂಟೆಗೆ ನಾನು ಮನೆಯಲ್ಲಿದ್ದಾಗ ಚಾಸಾ-1 ರವರು ನನಗೆ ಕರೆ ಮಾಡಿದ್ದರು ಮತ್ತು ಅವರ ಆದೇಶದಂತೆ ನಾನು ಬೆಳಿಗ್ಗೆ 07-00 ಗಂಟೆಗೆ ಕಚೇರಿಗೆ ಬಂದೆ ನಂತರ ಕಚೇರಿಯಿಂದ ನಾನು, ಚಾಸಾ-1 ಮತ್ತು 8 ರವರು ಸರ್ಕಾರಿ ವಾಹನದಲ್ಲಿ ಚಂದಾಪೂರ ಕ್ರಾಸ್ ಬಳಿ ಹೋದೆವು ಎಂಬ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಬರೆಸಿದ್ದೇನೆ. ಆ ರೀತಿ ಯಾವುದೇ ಹೇಳಿಕೆಯನ್ನು ನಾನು ಚಾಸಾ-9 ರವರ ಮುಂದೆ ಕೊಟ್ಟಿಲ್ಲ ಎಂದು ಸೂಚಿಸಿದರೆ ಸಾಕ್ಷಿ ನಾನು ಹೇಳಿದ್ದೇನೆ ಆದರೆ ಚಾಸಾ-9 ರವರು ಬರೆದುಕೊಂಡಿಲ್ಲ ಎನ್ನುತ್ತಾರೆ.

ಕಳೆದ 4-5 ವರ್ಷಗಳಿಂದ ನಾನು ಚಿಂಚೋಳಿಯಲ್ಲೆ ಕೆಲಸ ಮಾಡುತ್ತಿದ್ದೇನೆ ಎನ್ನುವುದು ಸರಿ. ಈ ಪ್ರಕರಣದಲ್ಲಿ ಸಲ್ಲಿಸಲಾದ ದೂರಿನ ಪ್ರಕಾರ ಘಟನೆ ಚಂದಾಪೂರದ ಬಸವೇಶ್ವರ ವೃತ್ತದ ಬಳಿ ನಡೆದಿತ್ತು ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಘಟನಾ ಸ್ಥಳ ಚಿಂಚೋಳಿ ಪಟ್ಟಣದ ಬಸವೇಶ್ವರ ವೃತ್ತದ ಹತ್ತಿರ ಇದೆ ಎಂದು ಹೇಳಿದ್ದೇನೆ ಎಂದರೆ ಸರಿ. ಘಟನಾ ಸ್ಥಳ ಪ್ರಮುಖ ಹೆದ್ದಾರಿಯಾಗಿರುವುದರಿಂದ ಮತ್ತು ಅದರ ಸುತ್ತ-ಮುತ್ತ ವಾಣಿಜ್ಯ ಚಟುವಟಿಕೆಗಳು ನಡೆಯುವುದರಿಂದ ಅಲ್ಲಿ ಸದಾ ಜನರ ಓಡಾಟ ಇರುತ್ತದೆ ಎಂದರೆ ಸರಿ. ಆರೋಪಿ ಘಟನಾ ಸ್ಥಳದಲ್ಲಿ ಬೈಕ್ ಸಮೇತ ಮದ್ಯದ ಬಾಟಲಿಗಳನ್ನು ತುಂಬಿದ್ದ ರಟ್ಟಿನ ಬಾಕ್ಸಗಳನ್ನು ಬಿಟ್ಟು ಓಡಿಹೋದ ಎನ್ನಲಾದ ಸಂದರ್ಭದಲ್ಲಿ ಅವುಗಳನ್ನು ಜಪ್ತು ಮಾಡಲು ಚಾಸಾ-1 ರವರು ಘಟನಾ ಸ್ಥಳದ ಆಜು-ಬಾಜು ಇರುವ ಅಂಗಡಿ ಮುಂಗಟ್ಟುಗಳ ಮಾಲೀಕರನ್ನು ಅಥವಾ ಅಲ್ಲಿ ಓಡಾಡುತ್ತಿದ್ದ ಸಾರ್ವಜನಿಕರನ್ನು ಪಂಚರಾಗಿ

ಸಹಕರಿಸುವಂತೆ ಕೇಳಿಕೊಂಡರೆ ಎಂಬ ಪ್ರಶ್ನೆಗೆ ಸಾಕ್ಷಿ ಕೇಳಿಕೊಂಡರು ಆದರೆ ಅವರ್ಯಾರು ಒಪ್ಪಲಿಲ್ಲ ಎನ್ನುತ್ತಾರೆ. ಚಾಸಾ-1, ನಾನು ಮತ್ತು ಚಾಸಾ-8 ರವರು ನಮ್ಮ ಕಚೇರಿಯಲ್ಲಿದ್ದ ಬಾಟಲಿಗಳನ್ನು ಬನಾವಟ್ಟು ಮಾಡಿ ಸುಳ್ಳು ಪಂಚನಾಮೆ ಜರುಗಿಸುತ್ತಿದ್ದರಿಂದ ಸಾರ್ವಜನಿಕರ್ಯಾರು ಸದರಿ ಪಂಚನಾಮೆಗೆ ಸಹಕರಿಸಲಿಲ್ಲ ಎನ್ನುವುದು ಸರಿಯಲ್ಲ.

ಅಬಕಾರಿ ನಿಯಮಗಳ ಪ್ರಕಾರ ಮದ್ಯವನ್ನು ನಮ್ಮ ಇಲಾಖೆಯಿಂದ ಯಾವ ಮದ್ಯದ ಅಂಗಡಿಗೆ ಪೂರೈಕೆ ಮಾಡಲಾಗಿದೆ ಮತ್ತು ಎಷ್ಟು ಪ್ರಮಾಣದ ಮದ್ಯವನ್ನು ಪೂರೈಕೆ ಮಾಡಲಾಗಿದೆ ಎಂಬ ಬಗ್ಗೆ ನಮ್ಮ ಇಲಾಖೆಯಲ್ಲಿ ದಾಖಲೆ ಇರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಜಪ್ತು ಮಾಡಲಾಯಿತು ಎನ್ನಲಾದ ಎಲ್ಲಾ ಮದ್ಯದ ಬಾಟಲಿಗಳನ್ನು ನಮ್ಮ ಇಲಾಖೆಯಿಂದ ಯಾವ ಮದ್ಯದ ಅಂಗಡಿಗೆ ಪೂರೈಕೆ ಮಾಡಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ ಮತ್ತು ಆ ಬಗ್ಗೆ ನಮ್ಮ ಅಧಿಕಾರಿಗಳು ತನಿಖೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಕಚೇರಿಯಲ್ಲಿ ಕೆಲವೆ ಮಂದಿ ಸಿಬ್ಬಂದಿ ಇರುವುದರಿಂದ ನಮ್ಮ ಅಧಿಕಾರಿಗಳು ತನಿಖೆ ಹೇಗೆ ಮಾಡುತ್ತಾರೆ ಎನ್ನುವುದು ನಮಗೆ ಗೊತ್ತಿರುತ್ತದೆ ಎನ್ನುವುದು ಸರಿ. ಸಾಮಾನ್ಯವಾಗಿ ನಮ್ಮ ಕಚೇರಿಯಲ್ಲಿ ಮದ್ಯದ ಅಂಗಡಿಗಳಿಂದ ಮದ್ಯವನ್ನು ತಂದು ಸಂಗ್ರಹಿಸಿರುತ್ತೇವೆ ಮತ್ತು ಯಾವುದಾದರೂ ಅಬಕಾರಿ ಪ್ರಕರಣ ದಾಖಲಿಸಬೇಕಾದಾಗ ಅವುಗಳನ್ನು ಬಳಕೆ ಮಾಡಿಕೊಳ್ಳುತ್ತೇವೆ ಎನ್ನುವುದು ಸರಿಯಲ್ಲ.

ಪಂಚಸಾಕ್ಷಿದಾರರ ಪೈಕಿ ಚಾಸಾ-2 ರವರ ಹೆಸರು ಚೆನ್ನಪ್ಪ ತಂದೆ ಚಂದ್ರಪ್ಪ, ಚಾಸಾ-3 ರವರ ಹೆಸರು ಸೋಮನಾಥ ಮತ್ತು ಚಾಸಾ-3 ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಚಾಸಾ-9 ರವರ ಮುಂದೆ ನಾನು ಕೊಟ್ಟಿರುವ ಹೇಳಿಕೆಯಲ್ಲಿ ಪಂಚಸಾಕ್ಷಿದಾರರ ಹೆಸರು, ವಿಳಾಸವನ್ನು ನಾನು ಬರೆಸಿಲ್ಲ. ನಾನು ಹೇಳಿರುವ ರೀತಿಯ ಯಾವುದೇ ಘಟನೆ ನಡೆದಿಲ್ಲ ಹಾಗಾಗಿಯೇ ನನ್ನ ಹೇಳಿಕೆ ದಾಖಲೆಯಲ್ಲಿ ಪಂಚರ ಹೆಸರು, ವಿಳಾಸವನ್ನು ಬರೆಸಿಲ್ಲ ಎನ್ನುವುದು ಸರಿಯಲ್ಲ. ದಾಳಿ ಕಾಲಕ್ಕೆ ನಾನು, ಚಾಸಾ-1 ಮತ್ತು 8 ರವರು ಸಮವಸ್ತ್ರದಲ್ಲಿ ಇದ್ದೆವು. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಬರೆಸಿದ್ದೇನೆ. ಸಾಮಾನ್ಯವಾಗಿ ಸಮವಸ್ತ್ರದಲ್ಲಿರುವ ಅಧಿಕಾರಿಗಳು ಯಾರೇ ಒಬ್ಬ ವ್ಯಕ್ತಿಯನ್ನು ಬೆನ್ನತ್ತಿ ಹಿಡಿಯಲು ಪ್ರಯತ್ನ ಪಟ್ಟರೆ ಅದನ್ನು ನೋಡಲು ಹಲವು ಸಾರ್ವಜನಿಕರು ಸೇರುತ್ತಾರೆ ಎಂದರೆ ಸರಿ. ಆ ರೀತಿ ಸೇರಿದ ಸಾರ್ವಜನಿಕರನ್ನು ಆರೋಪಿಯನ್ನು ಹಿಡಿಯಲು ಸಹಕರಿಸುವಂತೆ ನೀವೆನಾದರೂ ಕೇಳಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಘಟನಾ ಸ್ಥಳದ 4 ದಿಕ್ಕಿಗೆ ಹಳ್ಳ ಮತ್ತು ತಗ್ಗು ಇದೆ ಎಂದರೆ ಸರಿ. ಹಳ್ಳ ಮತ್ತು ತಗ್ಗು ಇರುವುದರಿಂದ ಅಲ್ಲಿಂದ ಯಾರೇ ವ್ಯಕ್ತಿ ಓಡಿ ಹೋದರು ಪೊಲೀಸರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಆರೋಪಿ ಘಟನಾ ಸ್ಥಳದ ಬಳಿ ಇರುವ ಶಾಲೆಯ

ಹಿಂಭಾಗದಲ್ಲಿ ತಪ್ಪಿಸಿಕೊಂಡು ಓಡಿ ಹೋದ ಎನ್ನುತ್ತಾರೆ. ಯಾವ ಶಾಲೆ ಹಿಂಭಾಗದಲ್ಲಿ ತಪ್ಪಿಸಿಕೊಂಡು ಹೋದ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಶಾಲೆಯ ಬಗ್ಗೆ ನನಗೆ ನಿಖರವಾದ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಹೇಳಿದ ಶಾಲೆಯ ಹಿಂಭಾಗದಲ್ಲೂ ತಗ್ಗು ಇದೆ ಎಂದರೆ ಸರಿ.

ನಾನು ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಹೋಗೆ ಇಲ್ಲ ಮತ್ತು ನಾನು ಹೇಳಿರುವ ರೀತಿಯ ಯಾವುದೇ ಘಟನೆ ನಡೆದೆ ಇಲ್ಲ ಆದರೂ ಸಹ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-9 ರವರು ನನ್ನ ಹೇಳಿಕೆ ಪಡೆದ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ನಮ್ಮ ಇಲಾಖೆಯ ಅಂಕಿ-ಸಂಖ್ಯೆಗಳನ್ನು ಭರ್ತಿ ಮಾಡುವ ಸಲುವಾಗಿ ನಮ್ಮ ಮೇಲಾಧಿಕಾರಿಗಳಾದ ಚಾಸಾ-1 ಮತ್ತು 9 ರವರು ದಾಖಲೆಗಳು ಹಾಗೂ ಮುದ್ದೆಮಾಲುಗಳನ್ನು ಸೃಷ್ಠಿ ಮಾಡಿ ಈ ಸುಳ್ಳು ಪ್ರಕರಣ ದಾಖಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಅವರ ಮಾತು ಕೇಳಿಕೊಂಡು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ಇಲಾಖೆಗೆ ಮದ್ಯದ ಅಂಗಡಿಗಳಲ್ಲಿ ಇಂತಿಷ್ಟೆ ಮದ್ಯವನ್ನು ಮಾರಾಟ ಮಾಡಿಸಬೇಕೆಂಬ ನಿರ್ದೇಶನ ಇರುತ್ತದೆ ಮತ್ತು ನಿರ್ದಿಷ್ಟ ಮದ್ಯ ಮಾರಾಟ ಮಾಡದೆ ಇರುವ ಅಂಗಡಿ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರೆ ಸರಿ. ಸದರಿ ನಿಯಮವನ್ನು ದುರುಪಯೋಗಪಡಿಸಿಕೊಂಡು ನಮ್ಮ ಅಧಿಕಾರಿಗಳೇ ಮದ್ಯ ಖರೀದಿ ಮಾಡಿ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವುದು ಎಲ್ಲಾ ಸುಳ್ಳು ಎನ್ನುವುದು ಸರಿಯಲ್ಲ.

ಮು.ಮಾ.1 ರಿಂದ 8 ರ ರೀತಿಯ ಖಾಲಿ ಬಾಟಲಿಗಳು ನಮ್ಮ ಕಚೇರಿಯಲ್ಲಿ ಸಾಮಾನ್ಯವಾಗಿ ಸಿಗುತ್ತದೆ ಎನ್ನುವುದು ಸರಿಯಲ್ಲ. ಸದರಿ ರೀತಿಯ ಖಾಲಿ ಬಾಟಲಿಗಳು ಸಾರ್ವಜನಿಕ ರಸ್ತೆಯ ಅಕ್ಕ-ಪಕ್ಕ ಸಾಮಾನ್ಯವಾಗಿ ಬಿದ್ದಿರುತ್ತದೆ ಎಂದರೆ ಸರಿ. ಆ ರೀತಿ ಬಿದ್ದ ಬಾಟಲಿಗಳನ್ನು ಈ ಪ್ರಕರಣಕ್ಕಾಗಿ ಬನಾವಟ್ಟು ಮಾಡಲಾಗಿದೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**